ಬಂದರೆ ಅಲ್ಲಿಗೆ ಟೀಚರ್ ಸೋತ ಹಾಗೆ ಆಗುತ್ತೆ.

ಭಾಷೆ ಕಲಿಸುವಾಗ, ಪದಗಳನ್ನು ಪರಿಚಯಿಸುವಾಗ ಸಾಕಷ್ಟು ಉದಾಹರಣೆಗಳನ್ನು ಕೊಡಬೇಕು. ಆ ಪದದ ವಿವಿಧ ಅರ್ಥಗಳನ್ನ, ಅವುಗಳ ಬಳಕೆಯನ್ನ ವಾಕ್ಯಗಳಲ್ಲಿ ಬಳಸಿ ತೋರಿಸಬೇಕು. ನಾನು ತರಗತಿಯಲ್ಲಿ ಮಕ್ಕಳಿಗೆ ದೊಡ್ಡ ಪದವೊಂದನ್ನು ಕೊಟ್ಟು ಎಷ್ಟು ಸಣ್ಣ ಪದಗಳನ್ನು ಮಾಡಬಲ್ಲಿರಿ ಅನ್ನೋ ಆಟ ಆಡ್ತೀನಿ. ಉದಾಹರಣೆಗೆ **constitution** ಅನ್ನೋ ಪದ. ಈ ತರಹ ಪದಗಳನ್ನು ಮಕ್ಕಳು ಹುಡುಕಿದಾಗ ಅವುಗಳಲ್ಲಿ ಯಾವ ಯಾವ ಪದಗಳನ್ನ ಯಾವ ಯಾವ ಸಮಯದಲ್ಲಿ ಉಪಯೋಗಿಸಬಹುದು ಅಂತ ಹೇಳಿಕೊಡುವುದು ಬಹಳ ಮುಖ್ಯ. ಒಂದು ಭಾಷೆಯನ್ನು ಹೀಗೆ ತಿಳಿದುಕೊಳ್ಳಬೇಕು. ಅದನ್ನು ಬಳಸುವುದು ಹೇಗೆ, ಅದರ ಪ್ರಯೋಜನ ಏನು ಅಂತ ತಿಳಿಯಬೇಕು.

## ಅನುವಾದದ ಬಗೆಗೆ...

ಸ್ವಂತ ಬರವಣಿಗೆ ಎಂದೂ ಮಾಡಬೇಕು ಅನ್ನಿಸಿಲ್ಲ. ಅನುವಾದ ಕೂಡ ಯಾರಾದರೂ ಕೇಳಿದಾಗಷ್ಟೇ ಮಾಡಿದ್ದೇನೆ ಹೊರತು ನಾನಾಗಿ ಯಾವುದನ್ನೂ ಆಯ್ಕೆ ಮಾಡಿಕೊಂಡು ಮಾಡಲಿಲ್ಲ. ಆದರೆ, ಅನುವಾದಕ್ಕೆ ಕೂತ ಕ್ಷಣದಲ್ಲಿ ನಾನು ಮತ್ತು ಆ ಪಠ್ಯ ಎರಡರ ಹೊರತು ಬೇರೇನೂ ಪ್ರಪಂಚದಲ್ಲಿರುವುದಿಲ್ಲ. ಆ ಮಟ್ಟಿಗೆ ಸಂಪೂರ್ಣವಾಗಿ ಅದರಲ್ಲೇ ಮುಳುಗಿಹೋಗುತ್ತೇನೆ.

ಮೊದಲ ಸಲ ಅನುವಾದದ ಅವಕಾಶ ಸಿಕ್ಕಾಗ **it was a challange. But a very pleasant pleasurable challenge.** 'ಕರ್ವಾಲೊ' ಮತ್ತು 'ಚಿದಂಬರ ರಹಸ್ಯ' ಕಾದಂಬರಿಗಳ ಅನುವಾದ ಮೊದಲು ಪ್ರಕಟವಾಯಿತು. ಅವನ್ನು 'ಪೆಂಗ್ವಿನ್' ಪ್ರಕಾಶನದವರು ಪ್ರಕಟಿಸಿದರು.

ಅನುವಾದ ಅನ್ನೋದು ಕೂಡ ಸೃಜನಶೀಲವಾದದ್ದು. ಮೂಲ ಪಠ್ಯವೊಂದನ್ನು ಓದಿದಾಗ ಮನಸ್ಸಿಗೆ ಯಾವ ಭಾವ ಬರುತ್ತೋ ಅದೇ ಭಾವನೆ ಅನುವಾದವನ್ನು ಓದಿದಾಗಲೂ ಬರಬೇಕು. ಆಗ ಮೂಲ ಬರಹಗಾರನಿಗೆ ನ್ಯಾಯ ಒದಗಿಸಿದಂತಾಗುತ್ತದೆ. ಯಾವ ಪದ ಆ ಭಾವವನ್ನು



ಪದ್ಮಾ ರಾಮಚಂದ್ರ ಶರ್ಮ ಅವರೊಂದಿಗೆ ಸಂದರ್ಶಕಿ ಹೇಮಾ ಎಸ್.